ಅವರ ರುಚಿ, ಅಭಿರುಚಿ ಮತ್ತು ಜ್ಞಾನ ವ್ಯಕ್ತವಾಗುವಂತಿದೆ. ಮಾದರಿಗೆಂಬಂತೆ ಈ ಸಾಲುಗಳನ್ನು ಗಮನಿಸಬಹುದು: 'ರಾಗದಲ್ಲಿ ಪರಿಪೂರ್ಣತೆ ಎಂಬುದಿಲ್ಲ. ಅದು ವಾಸ್ತವ ಜೀವನದಲ್ಲಿಯಂತೆ ಸದಾ ಸಂಭವಿಸಲಿರುವ ಸ್ಥಿತಿಯಲ್ಲಿರುವಂಥದು; ಈ ಕ್ಷಣ ಹುಟ್ಟಿ ಈ ಕ್ಷಣದಲ್ಲೇ ಉಳಿಯುವಂಥದು. ಅದರ ಭೂತಕಾಲದಲ್ಲಿ ಏನೂ ಇಲ್ಲ. ಅದು ಹೇಗೆ ಆಗಮಿಸಿತೋ ಮತ್ತೆ ಹಾಗೆಯೇ ಅದು ಆಗಮಿಸಲಾರದು. ಅದನ್ನು ಒಂದು ಚಿತ್ರದಂತೆ ಅಥವಾ ಶಿಲ್ಪದಂತೆ ಗೋಡೆಗೆ ತೂಗುಹಾಕಲಾಗದು ಅಥವಾ ಒಂದು ಬುನಾದಿಯ ಮೇಲೆ ನಿಲ್ಲಿಸಲಾಗದು. ತಂಬೂರಿಯ ಶ್ರುತಿಯೊಡನೆ ತತ್ಕ್ಷಣ ಸಂಭವಿಸುವ ಅದು ತಂಬೂರಿಯ ಅನುರಣನದಂತೆಯೇ ಆದಿ, ಅಂತ್ಯಗಳಿಲ್ಲದ್ದು. ಆದ್ದರಿಂದಲೇ ರಾಗವನ್ನು ಸೃಷ್ಟಿಸಲಾಗದು ಮತ್ತು ಕಂಡುಹಿಡಿಯಲಾಗದು. ಅದನ್ನು ಹುಡುಕಿಕೊಳ್ಳಬಹುದಷ್ಟೆ. ಯಾಕೆಂದರೆ ಸಂಗೀತಜ್ಞರು ಹೇಳುವಂತೆ ರಾಗಗಳು ಮನುಕುಲದ ಸುಪ್ತಪ್ರಜ್ಞೆಯಲ್ಲಿ ಮಲಗಿದ್ದು ಸ್ವರಗಳ ಧಾತುವನ್ನು ಮತ್ತು ಸತ್ವವನ್ನು ಬಲ್ಲ ಸೃಜನಶೀಲ ಸಂಗೀತಗಾರನೊಬ್ಬ ಬಳಿಗೆ ಬಂದು ಎಬ್ಬಿಸುವುದಕ್ಕೆ ಕಾಯುತ್ತಿರುತ್ತವೆ.'

ಈ ಸಂಕಲನದಲ್ಲಿ ದಿವಾಕರ್ ಅಡಿಗರ ಬಗ್ಗೆ, ಮಾರ್ಕೆಸ್ ಕಾದಂಬರಿಯ ಬಗ್ಗೆ, ಅತಿಸಣ್ಣಕತೆಯ ಬಗ್ಗೆ ಬರೆದ ಲೇಖನಗಳು ಸೇರಿವೆ. ಆದರೆ ದಿವಾಕರ್ ಕೇವಲ ಕಲಾ ಜಗತ್ತಿನಲ್ಲಿ ತಮ್ಮನ್ನು ಕಳೆದುಕೊಂಡಿರುವವರಲ್ಲ. ಅಷ್ಟೇ ಆಸಕ್ತಿ ಮತ್ತು ಸೂಕ್ಷ್ಮತೆಗಳಿಂದ ಅವರು ತಮ್ಮ ಸುತ್ತಲ ವಾಸ್ತವ ಜಗತ್ತನ್ನೂ ಗಮನಿಸುತ್ತಿರುತ್ತಾರೆ. ಬೆಂಗಳೂರಿನ ಬಗ್ಗೆ ಅವರು ಬರೆದಿರುವ ಲೇಖನದಲ್ಲಿ ಬೆಂಗಳೂರಿನ ಚರಿತ್ರೆಯೂ ವರ್ತಮಾನವೂ ಹಲವು ಕುತೂಹಲಕಾರೀ ವಿವರ–ವರ್ಣನೆಗಳಲ್ಲಿ ನಮ್ಮ ಮುಂದೆ ಕಟ್ಟಿಕೊಳ್ಳುತ್ತವೆ. ಅಷ್ಟೇ ಅಲ್ಲ ಅವರ ಕಣ್ಣು ಹಕ್ಕಿ ಮೈಯನ್ನೂ, ಕಿವಿಗಳು ಗುಬ್ಬಿಗಳ ಚಿಂವ್ ಚಿಂವ್ ಅನ್ನು ಕೇಳಿಸಿಕೊಳ್ಳುವಷ್ಟು ವ್ಯವಧಾನವನ್ನೂ, ಸಹನೆಯನ್ನೂ ಜೀವಪ್ರೀತಿಜೀವನಪ್ರೀತಿಗಳನ್ನು ಈ ಕಾಲದಲ್ಲೂ ಉಳಿಸಿಕೊಂಡಿವೆ. ಅವರ ಬರಹಗಳನ್ನು ಓದುವುದೆಂದರೆ ಒಂದು ವಿಶ್ವಸಂಚಾರ ಮಾಡಿದಂತೆ.

## ಟಿ.ಪಿ. ಅಶೋಕ

ಕನ್ನಡ ವಿಮರ್ಶೆಯಲ್ಲಿ ಟಿ.ಪಿ. ಅಶೋಕ ಅವರದು ಪ್ರಮುಖ ಹೆಸರು. ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ನೆಲೆಸಿರುವ ಅವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದು, ಇತ್ತೀಚೆಗೆ ನಿವೃತ್ತರಾಗಿದ್ದಾರೆ. ಕನ್ನಡದ ಪ್ರಮುಖ ಲೇಖಕರ ಸಾಹಿತ್ಯದ ಕುರಿತಾಗಿ ವಿಶಿಷ್ಟ ಒಳನೋಟಗಳಿಂದ ಬರೆದಿರುವ ಅಶೋಕ ಹಲವು ಅನುವಾದಗಳನ್ನೂ ಮಾಡಿದ್ದಾರೆ. ಓದುಗರ ಮನಮುಟ್ಟುವಂತೆ ಸರಳವಾಗಿ ವಿಮರ್ಶೆಗಳನ್ನು ಬರೆಯುವ ಅವರ ಕೆಲವು ಸಂಪಾದಿತ ಪುಸ್ತಕಗಳೂ ಪ್ರಕಟವಾಗಿವೆ.